# 4

# “ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು!”

ಇಂದು ಜನರಿಗೆ ಒಂದು ಗುರಿಯಿರುವುದು - ಅದು “ಸುಖದಿಂದಿರುವುದು.” ಅವರು ಭಾವೋದ್ವೇಗತೆಯನ್ನೂ, ವಿನೋದವನ್ನೂ, “ತಮಾಷೆಯನ್ನೂ ಆಟಗಳನ್ನೂ” ಬಯಸುತ್ತಾರೆ. ಬೈಬಲಿನ ಆನಂದದೊಂದಿಗೆ “ಸಂತೋಷವಾಗಿರುವದನ್ನು” ಎಂದೂ ಗಲಿಬಿಲಿಗೊಳಿಸಬೇಡ. ಹೆಚ್ಚಾದವರು ಪರಿಶುದ್ಧರಾಗಿರುವದಕ್ಕಿಂತ ಸಂತೋಷವುಳ್ಳವರು, ಶುದ್ಧರಾಗಿರುವದಕ್ಕಿಂತ ಸುರಕ್ಷಿತವಾಗಿರುವರು, ನಂಬಿಗಸ್ತರಾಗಿರುವದಕ್ಕಿಂತ ಯಶಸ್ವಿಯಾದವರು ಆಗಿರುತ್ತಾರೆ. ಹೆಚ್ಚಾದ ತಂದೆತಾಯಿಗಳು, ತಮ್ಮ ಮಕ್ಕಳಿಗಾಗಿ ಬಯಸುವ ಸಂಗತಿಯು ಅವರಿಗಾಗಿ “ಸಂತೋಷವುಳ್ಳವರಾಗಿರುವುದು.” ಅವರು ಹಾಗಿಲ್ಲದೇ ಇರುವಂಥದ್ದು ಇನ್ನೂ ದುಃಖಕರವಾದ ಸಂಗತಿಯಾಗಿದೆ. ನೀಚ ಪಾಪದಲ್ಲಿ ಕೆಲವರು, “ನನ್ನ ಜೀವನ ಶೈಲಿಯು ಪಾಪಭರಿತವಾದದ್ದಾಗಿರಬಹುದು, ಆದರೆ ನಾನು ಸುಖದಿಂದಿರುವದನ್ನು ದೇವರು ಬಯಸುತ್ತಾನೆಂದು ಯೋಚಿಸುತ್ತೇನೆ” ಎಂದು ನಿರ್ಣಯಿಸಿಕೊಳ್ಳುತ್ತಾರೆ. ಯಥಾರ್ಥವಾದ ಆತ್ಮಿಕತೆಯೂ ಮತ್ತು “ಸುಖದಿಂದ” ಇರುವುದೂ ಸಾಮಾನ್ಯವಾಗಿ ಮಿಶ್ರವಾಗುವದಿಲ್ಲ. ಈ ನಿರೂಪಣೆಯ ಪ್ರಕಾರವಾಗಿ “ಸುಖದಿಂದಿರಲು” ದೇವರು ಎಂದೂ ಯಾರಿಗೂ ಆಜ್ಞಾಪಿಸುವದಿಲ್ಲ.

ಅದೇ ರೀತಿಯಲ್ಲಿ, ಆಧುನಿಕ ಸಮಾಜವು ಆರೋಗ್ಯವನ್ನು ಆರಾಧಿಸುತ್ತದೆ. ಇದು “ಒಳಗೆ” ಇರುತ್ತದೆ! ಜನರು ವ್ಯಾಯಾಮ ಮಾಡುತ್ತಿರುವರು, ವನಸ್ಪತಿಗಳನ್ನು ಉಪಯೋಗಿಸುತ್ತಿರುವರು, ಪ್ರತಿಯೊಂದು ಹೊಸ ತಂತ್ರಗಾರಿಕೆಯನ್ನು ಅನುಸರಿಸುತ್ತಿರುವರು, ಅವರು ತಮ್ಮ ದೇಹವನ್ನು ಪೂಜಿಸಿಕೊಳ್ಳುತ್ತಿರುವಲ್ಲಿ, ಅವರು ತಮ್ಮ ಆತ್ಮಗಳನ್ನು ನಿರ್ಲಕ್ಷಿಸುತ್ತಿರುವರು.

ಪರಿಶುದ್ಧತೆಯು ಎಲ್ಲಿಗೆ ಹೋಗಿರುವುದು? ನೇರವಾಗಿ ಅನುಸರಿಸುವಾಗ ಸುಖವು ಸೋತುಹೋಗುವುದು. ಆರೋಗ್ಯವು ಅಂತಿಮವಾದ ಮರಣವನ್ನು ಜಯಿಸಲಾರದು. “ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನ ಮಾಡಿರಿ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ” (ಇಬ್ರಿಯ 12:14). ಸದ್ಗುಣವನ್ನು ಬಿಟ್ಟು ಜನರನ್ನೂ ಸಭೆಗಳನ್ನೂ ಕಟ್ಟಲು ನಾವು ಪ್ರಯತ್ನಿಸುವದರಿಂದ ಸೋತು ಹೋಗುತ್ತೇವೆ. ನಾವು ದೊಡ್ಡ ಸಭೆಯನ್ನು ಬಯಸುತ್ತೇವೆ. ಆದರೆ ಪರಿಶುದ್ಧ ಸಭೆಯನ್ನಲ್ಲ. ಸಭೆಯ ಸಂದರ್ಶನಗಳಲ್ಲಿ, ನನ್ನ ವಯಸ್ಸಿನ ಬಗ್ಗೆ, ನನ್ನ ವಿದ್ಯೆಯ ಬಗ್ಗೆ, ನನ್ನ ವಿಷಯಗಳ ಬಗ್ಗೆ ಮತ್ತು ಸಭೆಯು ಎದುರಿಸುತ್ತಿರುವ ವಿಷಯಗಳ ಬಗ್ಗೆ ನನ್ನನ್ನು ಪ್ರಶ್ನಿಸುತ್ತಾರೆ. “ನೀನು ಪರಿಶುದ್ಧನಾಗಿರುವಿಯೋ?”; “ದೇವರೊಂದಿಗೆ ನಿನಗೆ ಅಗಾಧವಾದ ಸಂಬಂಧವಿದೆಯೋ?” ಎಂದು ಯಾರೂ ನನ್ನನ್ನು ಕೇಳಿರುವದಿಲ್ಲ. ನಮ್ಮ ಅನುದಿನದ ನಡೆಯುವಿಕೆಯು ಒಂದು ಪರಿಶುದ್ಧ ನಡೆಯುವಿಕೆಯಾಗಿದೆ.

ನಾನು ಕಾಲೇಜಿನಲ್ಲಿದ್ದಾಗ, ಸಂದರ್ಶಕ ವಿದ್ಯಾರ್ಥಿಯು “ಪ್ರಸಂಗಿ ಬಾಲಕರಾದ” ನಮ್ಮನ್ನು ಆಘಾತಗೊಳಿಸಿದನು ಮತ್ತು ನಾವು ಕೋಪಗೊಳ್ಳುವಂತೆ ಮಾಡಿದನು. ದೇವರ ಪ್ರಥಮ ಗುಣಲಕ್ಷಣವು ಪ್ರೀತಿಯಾಗಿರುವದಿಲ್ಲ, ಆದರೆ “ಪರಿಶುದ್ಧತೆ”ಯಾಗಿರುವುದು ಎಂದು ಹೇಳಿದನು. ಅವನು ಪ್ರೀತಿಯನ್ನು ನಾಲ್ಕನೆಯದಾಗಿ ಯಾದಿ ಮಾಡಿದನು. ಪರಿಶುದ್ಧತೆಯನ್ನು ಪ್ರಥಮವಾಗಿ ಇಡುವದರಲ್ಲಿ ಅವನು ಸರಿಯಾಗಿದ್ದನು. (ಪ್ರೀತಿಯು

ನಾಲ್ಕನೆಯದಾಗಿರುವದರ ಬಗ್ಗೆ ನನಗೆ ತಿಳಿದಿರುವದಿಲ್ಲ; ಅದು ಐದನೆಯದು ಇಲ್ಲವೇ ಏಳನೆಯದು ಆಗಿರಬಹುದು.) "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ" (1 ಪೇತ್ರ 1:15, 16). ಪೇತ್ರನು "ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು" ಎಂಬುದನ್ನು ಒತ್ತಿ ಹೇಳಿದನು, ಆದರೆ "ಪ್ರೀತಿ, ಪ್ರೀತಿ, ಪ್ರೀತಿ" ಎಂಬುದನ್ನಲ್ಲ.

ದೇವರು ಇಂದು "ಒಳಗೆ" ಇರುವನು ಆದರೆ ಪರಿಶುದ್ಧನಾದ, ಬೈಬಲಿನ ದೇವರಾಗಿರುವದಿಲ್ಲ. ಪ್ರವೃತ್ತಿಯು ಮಿತಿಯಿಲ್ಲದ, ಸ್ಥಿರವಾದ, ನಿತ್ಯನಾದ, ಜೀವಿಸುವ, ಪರಿಶುದ್ಧನಾದ ದೇವರ ಕಡೆಗೆ ಚಲಿಸುತ್ತಿರುವದಿಲ್ಲ! ಇದು ನಮ್ಮ ಅನುದಿನದ ನಡೆಯುವಿಕೆಯ ದೇವರು ಆಗಿದ್ದಾನೆ. ದೇವರು ಪರಿಶುದ್ಧನಾಗಿರುವಂತೆ ನೀನು ಯೋಚಿಸದೇ ಇರುವಾಗ, ನೀನು ದೇವರಿಗೆ ಭಯಪಡಲಾರಿ. "ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು; ಮನುಷ್ಯರೆಲ್ಲರ [ಕರ್ತವ್ಯವು] ಇದೇ" (ಪ್ರಸಂಗಿ 12:13).

ಹೌದು, ದೇವರು ಪ್ರೀತಿಸ್ವರೂಪನಾಗಿದ್ದಾನೆ (1 ಯೋಹಾನ 4:8, 16). ಇದರ ಮೇಲೆ ಆತನು ಬೆಳಕಾಗಿದ್ದಾನೆ (1 ಯೋಹಾನ 1:5). ದೇವರ ನಿರ್ಮಲವಾದ ಶುದ್ಧತೆಯನ್ನು ಗೌರವಿಸು. ದೇವರ ಗುಣಲಕ್ಷಣವನ್ನು ಶುದ್ಧವಾಗಿಡು! ದೇವರು ಪ್ರೀತಿಸ್ವರೂಪನು, ಆದರೆ ಪ್ರೀತಿಯು ದೇವರಾಗಿರುವದಿಲ್ಲ. ಪ್ರೀತಿಯು ದೇವರನ್ನು ನಿರೂಪಿಸುವದಿಲ್ಲ; ದೇವರು ಪ್ರೀತಿಯನ್ನು ನಿರೂಪಿಸುತ್ತಾನೆ. ದೇವರು ಪ್ರೀತಿಸ್ವರೂಪನಾಗಿರುವದರಿಂದ, ಶಿಲುಬೆಯ ಅಗತ್ಯತೆಯಿರುವದಿಲ್ಲ. ಆದರೆ ದೇವರು ಪರಿಶುದ್ಧನಾಗಿರುವದರಿಂದ ಅಗತ್ಯವಾಗಿದೆ. ನಿನ್ನ ಮಗನನ್ನು ಕೊಂಡು ನೀನು "ನಿನ್ನ ಪ್ರೀತಿಯನ್ನು ಸಿದ್ಧಪಡಿಸಿ ತೋರಿಸಲಾರಿ" - ಇದು ಹುಚ್ಚುತನವಾಗಿದೆ. "ಪ್ರೀತಿಸುವ ದೇವರು ಒಬ್ಬ ಪಾಪಿಯನ್ನು ನರಕಕ್ಕೆ ಹೇಗೆ ಕಳುಹಿಸಬಲ್ಲನು?" ಎಂದು ಕೇಳುವುದು, ತಪ್ಪಾದ ಪ್ರಶ್ನೆಯನ್ನು ಕೇಳುವುದಾಗಿದೆ. *ಪರಿಶುದ್ಧನಾದ* ದೇವರು ಪಾಪಿಗಳನ್ನು ನರಕಕ್ಕೆ ಹೇಗೆ *ಕಳುಹಿಸಲಾರನು?* ದೇವರು ಪಾಪವನ್ನು ಇಲ್ಲವೇ ಪಾಪಿಗಳನ್ನು ಸ್ಪರ್ಶಿಸಲಾರನು. ಯಾವುದೇ ಪಾಪಿಗೆ ಪರಿಶುದ್ಧನಾದ ದೇವರ ಸನ್ನಿಧಿಯಲ್ಲಿ ನಿಲ್ಲಲಿಕ್ಕೆ ಹಕ್ಕಾಗಲೀ ಇಲ್ಲವೇ ಕಾರಣವಾಗಲೀ ಇರುವದಿಲ್ಲ! ನಿತ್ಯವಾದ ವಿಷಯವು "ಪಾಪಭರಿತ ಮನುಷ್ಯನು ಪರಿಶುದ್ಧನಾಗಿರುವುದು ಹೇಗೆ?" ಎಂಬುದು. ಪ್ರತಿಯೊಂದು ಪಾಪವು ಶಿಕ್ಷಿಸಲ್ಪಡತಕ್ಕದ್ದು. ಯಾವುದೇ ಪಾಪವು ಪರಲೋಕವನ್ನು ಪ್ರವೇಶಿಸುವದಿಲ್ಲ.

ಪಾಪದ ಸಂಬಳ ಮರಣ (ಆದಿಕಾಂಡ 2:17; ರೋಮಾಪುರ 6:23). ಪಾಪಭರಿತ ಮನುಷ್ಯನು ಕಳೆದು ಹೋಗಿದ್ದಾನೆ, ಸಹಾಯ ಹೀನನಾಗಿದ್ದಾನೆ, ನಿರೀಕ್ಷೆಯಿಲ್ಲದವನಾಗಿದ್ದಾನೆ. ಪಾಪಭರಿತ ಮನುಷ್ಯನು ತನ್ನನ್ನು ರಕ್ಷಿಸಿಕೊಳ್ಳಲಾರನು. ದೇವರ ಪರಿಶುದ್ಧತೆಯು ಆತನ ರೋಷವನ್ನು ಕೇಳುತ್ತದೆ. ದೇವರು ದೇವರಾಗಿರತಕ್ಕದ್ದು. ದೇವರ ಪರಿಶುದ್ಧತೆಯು ನ್ಯಾಯವನ್ನು ಕೇಳುತ್ತದೆ. ಈಗ, ಇದು, ಪ್ರೀತಿಯ ಪರಿಪೂರ್ಣ ಮಹಿಮೆಯಾಗಿದೆ (ಕೃಪೆಯ ಯೋಗ್ಯ ತಿಳುವಳಿಕೆ). ಮನುಷ್ಯನು ಮಾಡಲಾಗದ್ದನ್ನು ದೇವರು ಇನ್ನೂ ಮನುಷ್ಯನಲ್ಲಿ ಮಾಡಿದನು. ದೇವರು ಕ್ರಿಸ್ತನಲ್ಲಿ ಮಾನವ ಕುಲವನ್ನು ಒಂದುಗೂಡಿಸಿದನು. ಯೇಸುವು ಪರಿಪೂರ್ಣ ಜೀವಿತವನ್ನು ಜೀವಿಸಿದನು ಮತ್ತು ತನ್ನ ರಕ್ತವನ್ನು ಸುರಿಸಿದನು. ನ್ಯಾಯವು ಮರಣವನ್ನು - ರಕ್ತ ಯಜ್ಞವನ್ನು ಕೇಳಿತು. ಪ್ರೀತಿಯು ಕ್ರಯವನ್ನು ಕೊಟ್ಟಿತು! "ದೇವರು ಲೋಕವನ್ನು ಎಷ್ಟೋ ಪ್ರೀತಿ ಮಾಡಿದನು" (ಯೋಹಾನ 3:16ಎ). ಯೇಸುವು ಅನೇಕರಿಗಾಗಿ ತನ್ನ ಪ್ರಾಣವನ್ನು ಈಡಾಗಿ ಕೊಟ್ಟನು (ಮತ್ತಾಯ 20:28). ಯೇಸು ಕ್ರಿಸ್ತನು, *ಒಬ್ಬನೇ ರಕ್ಷಕನು,* ಪ್ರತಿಯೊಬ್ಬ ಮನುಷ್ಯನಿಗಾಗಿ ಮರಣವನ್ನು ಅನುಭವಿಸಿದನು (ಇಬ್ರಿಯ 2:9; ಅಪೊಸ್ತಲರ ಕೃತ್ಯಗಳು

4:11, 12). ದೇವರ ಪರಿಶುದ್ಧತೆಯನ್ನು ಹೊರತುಪಡಿಸಿ ದೇವರ ಪ್ರೀತಿಯು ಯಾವುದೇ ಅರ್ಥವನ್ನು ಕೊಡುವದಿಲ್ಲ. ದೇವರು ಪರಿಶುದ್ಧನಾಗಿಯೇ ಉಳಿಯುತ್ತಾನೆ; ಪಾಪದ ಮೇಲೆ ಆತನ ರೋಷವು ಶಿಲುಬೆಯಲ್ಲಿ ಯೇಸುವಿನ ಮೇಲೆ ಸುರಿಸಲ್ಪಟ್ಟಿತು. ಇದು *ಸುವಾರ್ತೆಯಾಗಿದೆ*! "ದೇವರು ಕ್ರಿಸ್ತನಲ್ಲಿ ಲೋಕವನ್ನು ತನ್ನೊಂದಿಗೆ ಸಂಧಾನಪಡಿಸಿ ಕೊಳ್ಳುತ್ತಿದ್ದನು ..." (2 ಕೊರಿಂಥ 5:19-21). ಯೇಸು ಕ್ರಿಸ್ತನು ಇಲ್ಲದಿದ್ದರೆ ಪಾಪಿಗಳು ತಮ್ಮ ಪಾಪಗಳಲ್ಲಿ ಸತ್ತು ಹೋಗುವರು. ಯೇಸುವು ಪಾಪಿಗಳಿಗಾಗಿ, ಭಕ್ತಿಹೀನರಿಗಾಗಿ ಮರಣ ಹೊಂದಿದನು (ರೋಮಾಪುರ 5:6-8). ಯೇಸುವು ಪಾಪಿಗಳನ್ನು ನಿಜವಾಗಿ ಯಾಗಲೀ ಇಲ್ಲವೇ ಸಂಭವನೀಯವಾಗಿಯಾಗಲೀ ರಕ್ಷಿಸಲಿಲ್ಲ; ಆತನು ಪಾಪಿಗಳನ್ನು "ರಕ್ಷಿಸಬಲ್ಲವರನ್ನಾಗಿ" ಮಾಡಿದನು. "*ಆತನಿಂದಲೇ* ... *ನಮ್ಮನ್ನು* ರಕ್ಷಿಸಲಿಕ್ಕೆ ದೇವರು *ತನ್ನನ್ನು* ... *ತಾನೇ ಕೊಟ್ಟನು!*"

| | |
|---|---|
| "ಆನಂದದಿಂದ" ಇರಲು ನನಗೆ *ಹಕ್ಕು* ಇದೆಯೋ? | *ಇಲ್ಲ!* |
| "ಆರೋಗ್ಯಕರವಾಗಿರಲು" ನನಗೆ *ಹಕ್ಕು* ಇದೆಯೋ? | *ಇಲ್ಲ!* |
| "ಪರಿಶುದ್ಧನಾಗಿರಲು" ನನಗೆ *ಹಕ್ಕು* ಇದೆಯೋ? | *ಹೌದು!* |

◇◇◇◇◇◇◇◇

# ಪರಿಶುದ್ಧಾತ್ಮನು ಮತ್ತು ನಾನು

## 1 ಕೊರಿಂಥ 2:9-16

*"ನಾನು ಹೇಳುವದೇನಂದರೆ ಪರಿಶುದ್ಧಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ ... ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ" (ಗಲಾತ್ಯ 5:16, 17, 25).*

ಸ್ಪಷ್ಟವಾಗಿ, ಪರಿಶುದ್ಧಾತ್ಮನಿಲ್ಲದೇ ನಮಗೆ ಆತ್ಮೀಕತೆಯು ಇರುವದಿಲ್ಲ. ಕಳೆದ ಐವತ್ತು ವರ್ಷಗಳು ಆತ್ಮನಲ್ಲಿ ಅಗಾಧವಾದ ಆಸಕ್ತಿಯನ್ನು ನೋಡಿವೆ. ದುರದೃಷ್ಟವಾಗಿ, ಅತಿಕ್ರಮಗಳು ಉಳಿದುಕೊಂಡಿವೆ. ಆತ್ಮನನ್ನು ಒಪ್ಪಿಕೊಳ್ಳುವುದು ಸಾಮಾನ್ಯವಾಗಿ (1) ಪ್ರತಿಬಂಧಿಸುವುದಾಗಲೀ ಇಲ್ಲವೇ (2) "St. Vitus' Dance" ಆಗಲೀ ಆಗಿರುತ್ತದೆ. ಎರಡೂ ವಿಧಾನಗಳು - "ನಾವು ಆತನನ್ನು ಮರೆಯೋಣ" ಮತ್ತು "ನಾವು ಹುಚ್ಚರಂತೆ ಆಗೋಣ" - ತಪ್ಪಾದವುಗಳಾಗಿರುತ್ತವೆ.

ಪರಿಶುದ್ಧಾತ್ಮನೊಂದಿಗಿನ ನಮ್ಮ ಪೂರ್ವ ಕಲ್ಪನೆಯು ಆತ್ಮನಲ್ಲಿ ಪ್ರೌಢಾವಸ್ಥೆಗೆ ನಮ್ಮನ್ನು ನಡಿಸುವದಿಲ್ಲ. ಯಾಕೆ? ಮೊದಲನೆಯದು, ನಾವು ಪರಿಶುದ್ಧ ಬರಹಗ ಳನ್ನು ತಿಳಿದಿರುವದಿಲ್ಲ, ಮತ್ತು ಎರಡನೆಯದು, ನಮಗೆ ಯಾವುದೇ ಅರ್ಥವಿರುವದಿಲ್ಲ. ಸದ್ದುಕಾಯರಿಂದ ಯೇಸುವು ಪ್ರಶ್ನಿಸಲ್ಪಟ್ಟಾಗ, "ನೀವು ಶಾಸ್ತ್ರವನ್ನಾದರೂ [ಬೈಬಲ್] ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ" ಎಂದು ಯೇಸು ಉತ್ತರ ಕೊಟ್ಟನು (ಮತ್ತಾಯ 22:23-32). ಆತ್ಮನು ನಮಗೆ ಪರಿಶುದ್ಧ ಬರಹಗಳನ್ನು ಕೊಟ್ಟನು

(2 ಪೇತ್ರ 1:20, 21; 2 ತಿಮೊಥೆ 3:15-17), ಮತ್ತು ಅವುಗಳನ್ನು ಬಿಟ್ಟು ಆತ್ಮನಲ್ಲಿ ನಾವು ಬೆಳೆಯಲಾರೆವು. ಆತ್ಮನು ಮತ್ತು ಪರಿಶುದ್ಧ ಬರಹಗಳು ಒಂದನ್ನೊಂದು ವಿರೋಧಿಸುವದಿಲ್ಲ. ಇದು *ಆತ್ಮಿಕ* ನಡೆಯುವಿಕೆಗಾಗಿ *ಪರಿಶುದ್ಧ ಬರಹದ* ಮಾರ್ಗವಾಗಿರುತ್ತದೆ. ಶುದ್ಧವಾದ ಬೋಧನೆಯು ಬಲವಾದ ಬೇರುಗಳನ್ನುಂಟು ಮಾಡುತ್ತದೆ. ಆತ್ಮಿಕತೆಯ ಪರವಾಗಿ ನಾವು ದೈವಜ್ಞಾನ ಶಾಸ್ತ್ರವನ್ನೂ ಎಂದೂ ಬಿಟ್ಟುಬಿಡಬಾರದು. ವಾಕ್ಯವನ್ನು ಪ್ರೀತಿಸುವದನ್ನು, ಅದರ ಮೇಲೆ ಧ್ಯಾನ ಮಾಡುವದನ್ನು, ಅದಕ್ಕೆ ವಿಧೇಯವಾಗುವದನ್ನು ಆತ್ಮನು ಬೋಧಿಸುತ್ತಾನೆ. ಜನರು ಪರಿಶುದ್ಧ ಬರಹಗಳ ಮೇಲೆ ಮತ್ತು ತಿಳುವಳಿಕೆಯ ಮೇಲೆ ಅವಲಂಭಿಸಿದೆ ಅನುಭವಗಳ ಮೇಲೆ ಮತ್ತು ಅನಿಸುವಿಕೆಗಳ ಮೇಲೆ ಅವಲಂಭಿಸು ವಾಗ ಆತ್ಮನಿಂದ ತೊಂದರೆಗೆ ಒಳಪಡುತ್ತಾರೆ.

ವ್ಯಕ್ತಿ ಎಂಬುದರ ಬದಲು ಆತ್ಮನು "ಅದು" ಇಲ್ಲವೇ "Ghost" ಎಂದು ಉಲ್ಲೇಖಿಸುವ ಬೈಬಲಿನ ಕೆಲವು ಭಾಷಾಂತರಗಳಿಂದ ಈ ಸಮಸ್ಯೆಯು ಇನ್ನೂ ಹೆಚ್ಚಾಗಿ ಜಟಿಲವಾಗಿ ಮಾಡಲ್ಪಟ್ಟಿದೆ. ಆತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ - ಚೈತನ್ಯವಲ್ಲ, ಉತ್ಸಾಹವಲ್ಲ, ಪ್ರೇರಣಾತ್ಮಕ ವಿಚಾರಿಸುವಿಕೆಯಾಗಿರುವದಿಲ್ಲ. ಯಾವುದೇ ಸಂಗತಿಯ ವ್ಯಕ್ತೀಕರಣವಾಗಲೀ ಆಗಿರುವದಿಲ್ಲ. ನಾನು ಒಬ್ಬ ವ್ಯಕ್ತಿಯಾಗಿರುವಂತೆ - ಅಷ್ಟೇ ಆತನು ಒಬ್ಬ ವ್ಯಕ್ತಿಯಾಗಿದ್ದಾನೆ. ಆತನು ವೈಯಕ್ತಿಕತೆಯನ್ನು ಹೊಂದಿಕೊಂಡಿರುತ್ತಾನೆ. ಆತನು ಕೇಳಬಲ್ಲನು, ಮಾತಾಡಬಲ್ಲನು, ಅಪೇಕ್ಷಿಸಬಲ್ಲನು, ದುಃಖಿಸಬಲ್ಲನು ಮತ್ತು ಆನಂದಿಸಬಲ್ಲನು. ಪ್ರಕಟನೆಗೆ ಅಂಟಿಕೊಳ್ಳಿರಿ, ಊಹಾಪೋಹಗಳಿಗೆ ಅಂಟಿಕೊಳ್ಳಬೇಡಿರಿ. ಬೈಬಲು ಸಜೀವವಾಗಿದೆ (ಇಬ್ರಿಯ 4:12); ಸಜೀವ ವಾಕ್ಯದ ಮುಖಾಂತರ ಮಾತ್ರವೇ ಆತ್ಮನು ನಮ್ಮೊಂದಿಗೆ ವೈಯಕ್ತಿಕವಾದ ಮಾರ್ಗದಲ್ಲಿ ಮಾತಾಡುತ್ತಾನೆ.

ಪರಿಶುದ್ಧ ಬರಹಗಳು ವಿವೇಕದಿಂದ ಮಾತ್ರವೇ ಅನ್ವಯಿಸಲ್ಪಡಬಹುದು. ನಮ್ಮ ಅನುದಿನದ ನಡೆಯು "ಶುದ್ಧೀಕರಿಸಲ್ಪಟ್ಟ ಸಾಮಾನ್ಯ ವಿವೇಕದೊಂದಿಗೆ" ಪರಿಶುದ್ಧ ಬರಹಗಳಿಂದ ಒಂದು ನಡೆಯಾಗಿದೆ. ಆತ್ಮದೊಂದಿಗೆ ಅತೀ ಹೆಚ್ಚಾದ ತಪ್ಪಾಭಿಪ್ರಾಯಗಳು ಪರಿಶುದ್ಧ ಬರಹಗಳಿಂದ ಮತ್ತು ವಿವೇಕದಿಂದ ಸುಲಭವಾಗಿ ಸರಿ ಪಡಿಸಲ್ಪಡಬಹುದು. ಇದರಲ್ಲಿ ನಾವು ಬಹಳ ಚೆನ್ನಾಗಿರುವದಿಲ್ಲ! ನಮ್ಮ ಬಗ್ಗೆ ನಾವು ಒಳ್ಳೆಯದಾಗಿ ಭಾವಿಸುವಂತೆ ಮಾಡಲು ಇಲ್ಲವೇ ಸಭೆಯಲ್ಲಿ ನಮಗೆ ತಮಾಷೆಯಿರಲು ಪರಿಶುದ್ಧಾತ್ಮನು ಕೊಡಲ್ಪಡಲಿಲ್ಲ. ಇನ್ನೊಂದೆಡೆಯಲ್ಲಿ, ಸೈತಾನನ ಬಗ್ಗೆ ನಾವು ಭಯಪಡುವದಕ್ಕಿಂತ ಹೆಚ್ಚಾಗಿ ಆತ್ಮನ ಬಗ್ಗೆ ಭಯಪಡಬಾರದು! ಆತ್ಮನು "ಹೋರಾಟಗಳಿಗಾಗಿ" ಇರುವದಿಲ್ಲ. "ಮೂರ್ಛೆಗಳು" ಬರುವದಕ್ಕಾಗಿ ಆತನು ನಮ್ಮನ್ನು ಬಲಪಡಿಸುವದಿಲ್ಲ. ಅಂಥ ಹುಚ್ಚುಮಾತು ಸಭೆಯ ಗೌರವನ್ನು ಹಾಳು ಮಾಡುತ್ತದೆ ಎಂದು ಪೌಲನು ಹೇಳಿದನು (1 ಕೊರಿಂಥ 14:23). ಆತ್ಮನು ಹುಚ್ಚುತನವನ್ನು ಉತ್ಪಾದಿಸುವದಿಲ್ಲ.

ಹೌದು, ಆತ್ಮನು ರಹಸ್ಯವುಳ್ಳವನಾಗಿದ್ದಾನೆ. ದೇವರು ರಹಸ್ಯವುಳ್ಳವನಾಗಿದ್ದಾನೆ. ಸುವಾರ್ತೆಯು ರಹಸ್ಯವುಳ್ಳದ್ದಾಗಿರುತ್ತದೆ. ಸಭೆಯು ರಹಸ್ಯವುಳ್ಳದ್ದಾಗಿರುತ್ತದೆ. ಹೀಗಿದ್ದರೂ, ರಹಸ್ಯವಾಗಿರುವಂಥದ್ದು ಅಂಥ ವಿಶ್ವಾಸವುಳ್ಳದ್ದು ಇಲ್ಲವೇ ದುರಾತ್ಮದ್ದಾಗಿರುವಂಥದ್ದು ಆಗಿರಬಾರದು. ಆತ್ಮನು ಸತ್ಯನಾಗಿದ್ದಾನೆ (1 ಯೋಹಾನ 5:6). ಆತನು ನಮ್ಮನ್ನು ಎಲ್ಲಾ ಸತ್ಯದಲ್ಲಿ ನಡಿಸಿದ್ದಾನೆ (ಯೋಹಾನ 16:13; 14:26). ಸತ್ಯವು ವಿವೇಕದೊಂದಿಗೆ ಮಾತ್ರವೇ ಯೋಗ್ಯವಾಗಿ ಕೈಕೊಳ್ಳಲ್ಪಡಬಹುದು. ಆತ್ಮನು ಬುದ್ಧಿಸ್ವಾಸ್ಥ್ಯತೆಯುಳ್ಳವನಾಗಿದ್ದಾನೆ, ಹುಚ್ಚನಾಗಿರುವದಿಲ್ಲ. *ನಮಗೆ ಪರಿಶುದ್ಧ ಬರಹಗಳ ಹಾಗೂ ವಿವೇಕದ ಅಗತ್ಯತೆಯಿದೆ!*

# ಪರಿಶುದ್ಧಾತ್ಮನು
# ದೇವರಾಗಿದ್ದಾನೆ

ಪರಿಶುದ್ಧಾತ್ಮನು ದೇವರಾಗಿರುವ ಸಂಗತಿಯು ಆತ್ಮನ ಬಗ್ಗೆ ಯಾವುದೇ ಬೈಬಲ್ ಅಧ್ಯಯನಕ್ಕೆ ವಿಶೇಷವಾದದ್ದಾಗಿದೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳುವುದು ಎಲ್ಲಾ ಹುಚ್ಚುತನವನ್ನು ತೆಗೆದು ಹಾಕುವುದು. ಆತ್ಮನು ದೇವರಾಗಿದ್ದಾನೆ! ದೇವರು ಭಯಭಕ್ತಿಯಿಂದ ಕಾಣಲ್ಪಡಬೇಕು - ತಂದೆಯಾದ ದೇವರು ಕುಮಾರನಾದ ದೇವರು ಮತ್ತು ಪರಿಶುದ್ಧಾತ್ಮನಾದ ದೇವರು. ದೇವರು ಕ್ರಮವುಳ್ಳವನಾಗಿದ್ದಾನೆ, ಗಲಿಬಿಲಿಯಾಗಿರುವದಿಲ್ಲ (1 ಕೊರಿಂಥ 14:33, 40). ಹಾಗಾದರೆ ಆತ್ಮನಿಂದ ಗಲಿಬಿಲಿಯನ್ನು ಯಾಕೆ ಅಪೇಕ್ಷಿಸುವಿರಿ?

1. *ತ್ರೈಯೇಕತ್ವ.* ಬೈಬಲು ದೇವರು ತ್ರೈಯೇಕನಾಗಿದ್ದಾನೆ. ತ್ರೈಯೇಕತ್ವವು, ದೇವತ್ವವು, ವಾಸ್ತವಿಕತೆಯ, ಐಕ್ಯತೆಯ ಮತ್ತು ಸಮಾಧಾನದ ಮೂಲನಾಗಿದ್ದಾನೆ. ದೇವರೊಂದಿಗಿನ ನಮ್ಮ ಅನುದಿನದ ನಡೆಯು ದೈವಿಕ ತ್ರಿತ್ವದೊಂದಿಗೆ ಇರುತ್ತದೆ.

2. *ದೇವರು.* ದೇವರ ತಿರುಳು ಆತ್ಮವಾಗಿದೆ (ಯೋಹಾನ 4:22-24). ಆತ್ಮನನ್ನು ಸಂಶೋಧಿಸುವ ಮೊದಲು ದೇವರನ್ನು ಅಗಾಧವಾಗಿ ಗೌರವಿಸತಕ್ಕದ್ದು. ನಾವು ಹಾಗೆ ಮಾಡದಿದ್ದರೆ, ಆಧ್ಯಾತ್ಮವಾದವು ಮತ್ತು ಮೂಢ ನಂಬಿಕೆಯು ಪರಿಣಾಮಗೊಳ್ಳುವುದು.

ಪರಿಶುದ್ಧಾತ್ಮನ ಬಗ್ಗೆ ಜನರಿಗೆ ಅನೇಕ ಪ್ರಶ್ನೆಗಳು ಇದ್ದೇ ಇರುತ್ತವೆ. ಆತ್ಮನ ವೈಯಕ್ತಿಕ ಹೆಸರು ಏನಾಗಿರುತ್ತದೆ? ಆತನು ಹೆಸರಿಲ್ಲದೇ ಇರುತ್ತಾನೆ. ಆತ್ಮನನ್ನು ಪ್ರೀತಿಸ ಬೇಕೆಂದು ಎಲ್ಲಿ ನಿರ್ದಿಷ್ಟವಾಗಿ ಹೇಳಲ್ಪಟ್ಟಿದೆ? ಅಂಥ ನಿರ್ದಿಷ್ಟವಾದ ಆಜ್ಞೆಯು ಇರುವದಿಲ್ಲ. ಹೀಗಿದ್ದರೂ, ದೇವರನ್ನು ಪ್ರಾಥಮಿಕವಾಗಿ ಪ್ರೀತಿಸುವದರ ಮತ್ತು ನಮ್ಮ ವೈರಿಗಳನ್ನು ಪ್ರೀತಿಸುವದರ ಮಧ್ಯದಲ್ಲಿ ಆತನನ್ನು ಪ್ರೀತಿಸುವುದು ನಿಶ್ಚಯವಾಗಿಯೂ ಸರಿಯಾದದ್ದಾಗಿದೆ!

ನಮ್ಮೊಂದಿಗೆ ವೈಯಕ್ತಿಕ ಸಂಬಂಧವಿಲ್ಲದೇ ಆತ್ಮನು ಅದೃಶ್ಯನಾಗಿದ್ದಾನೆ. ದೇವರು ತ್ರೈಯೇಕನಾಗಿದ್ದಾನೆ. ಎಲ್ಲರೂ ಸಮಾನವಾಗಿ ದೇವರಾಗಿದ್ದಾರೆ, ಆದಾಗ್ಯೂ ವ್ಯಕ್ತಿತ್ವದಲ್ಲಿ ಮತ್ತು ಕಾರ್ಯದಲ್ಲಿ ಭಿನ್ನವಾಗಿದ್ದಾರೆ, ಎಲ್ಲರೂ ಒಬ್ಬರಿಗೊಬ್ಬರು ಅಧೀನರಾಗಿದ್ದಾರೆ. ಆತ್ಮನು ತಂದೆಯ ಮೇಲೆ ಮತ್ತು ಕುಮಾರನ ಮೇಲೆ ಕೇಂದ್ರೀಕರಿಸುತ್ತಾನೆ ಆದರೆ ತನ್ನ ಮೇಲೆ ಅಲ್ಲ. ನಾವು ಆತನನ್ನು ಪ್ರಸಿದ್ಧ ಪಡಿಸುವಂಥದ್ದನ್ನು ಮತ್ತು ಮಹಿಮೆ ಪಡಿಸುವಂಥದ್ದನ್ನು ಕಂಡುಕೊಳ್ಳುವಾಗ ಆತನು ಭಯಾನಕತೆಗೆ ಗುರಿಯಾಗುತ್ತಾನೆ! ಇದು ಆತನ ಗುಣಲಕ್ಷಣವನ್ನು ಮತ್ತು ಆತನ ಕಾರ್ಯವನ್ನು ಉಲ್ಲಂಘಿಸುತ್ತದೆ. ನಾವು ಆತ್ಮನ ಮೇಲೆ ಕೇಂದ್ರೀಕರಿಸಬಾರದು ಆದರೆ ದೇವರ ಮೇಲೆ ಮತ್ತು ಯೇಸುವಿನ ಮೇಲೆ ಕೇಂದ್ರೀಕರಿಸತಕ್ಕದ್ದು.

ಆತನು ದೇವರನ್ನು ತಿಳಿದಿರುತ್ತಾನೆ ಮತ್ತು ದೇವರನ್ನು ಪ್ರಕಟಿಸುತ್ತಾನೆ (1 ಕೊರಿಂಥ 2:9-13). ಪರಿಶುದ್ಧಾತ್ಮನನ್ನು ಹೊಂದಿರುವದರ ಪರಿಣಾಮವು ಕ್ರಿಸ್ತನ ಮನಸ್ಸನ್ನು ಹೊಂದಿಕೊಂಡಿರುವುದಾಗಿದೆ. ನಾವು ದೇವರನ್ನು ತಿಳಿಯದೇ ಇದ್ದಾಗ ದೇವರಿಂದ ಆಶೀರ್ವಾದಗಳನ್ನು ಹೊಂದಿಕೊಳ್ಳಲಿಕ್ಕೆ ಪ್ರಾರ್ಥಿಸುವುದು, ದೇವರಿಗೆ ಅಪಮಾನ ಮಾಡುವಂಥದ್ದಾಗಿದೆ. ಆತ್ಮನನ್ನು ತಿಳಿಯದೇ ಆತ್ಮನಿಂದ ಅಧ್ಭುತಗಳನ್ನು ಇಲ್ಲವೇ ಅನುಭವಗಳನ್ನು ಬಯಸುವಂಥದ್ದು ಆತ್ಮನನ್ನು ಅವಮಾನಪಡಿಸುವಂಥದ್ದಾಗಿದೆ. ಆತ್ಮನಿಂದ ಮಾತ್ರವೇ ನಾವು ದೇವರ ಪೂರ್ಣತೆಯೊಂದಿಗೆ ನಾವು ತುಂಬಿಸಲ್ಪಡಬಹುದು (ಎಫೆಸ 3:14-19). ಆತ್ಮಿಕತೆಯು "ಬ್ಲ್ಯಾಕ್ ಮ್ಯಾಜಿಕ್" ಆಗಲೀ

ಇಲ್ಲವೇ "ವೂಡೂ" ಆಚರಣೆಯಾಗಲೀ ಆಗಿರುವದಿಲ್ಲ. ನಮ್ಮ ನಿಮಿತ್ತವಾಗಿ ಆತ್ಮನು ಅನುಭವಗಳನ್ನು ಕೊಡುವುದಿಲ್ಲ.

3. *ಯೇಸುಕ್ರಿಸ್ತನು.* ಆತ್ಮನು ಯೇಸುವನ್ನು ಮಹಿಮೆಪಡಿಸಲು ಯೇಸುವಿನಿಂದ ಕಳುಹಿಸಲ್ಪಟ್ಟನು. ಯೇಸುವನಲ್ಲಿ ಕೇಂದ್ರೀಕರಿಸಿದೆ ಆತ್ಮನ ಮೇಲೆ ಕೇಂದ್ರೀಕರಿಸುವುದು ಆತ್ಮನನ್ನು ಮತ್ತು ಆತನ ನಿಯೋಗವನ್ನು ಅತಿಕ್ರಮಿಸುವದಾಗಿರುತ್ತದೆ. ಆತ್ಮನು ನಮ್ಮನ್ನು ಆದರಿಸಲು ಯೇಸುವಿನಿಂದ ಕಳುಹಿಸಲ್ಪಟ್ಟ ಸಹಾಯಕನಾಗಿದ್ದಾನೆ (ಗ್ರೀಕ: *paraclete*) (ಯೋಹಾನ 14:16-18, 26; 15:26; 16:7-15). ಆತ್ಮನನ್ನು ತಂದೆಯಿಂದ ಇಲ್ಲವೇ ಕುಮಾರನಿಂದ ಎಂದೂ ಬೇರ್ಪಡಿಸಬಾರದು. ಅವರು ಇರುವಂತೆಯೇ, ಆತನು ಇರುತ್ತಾನೆ. ಅವರು ಬೋಧಿಸುವದನ್ನು, ಆತನು ಪ್ರಕಟಿಸುತ್ತಾನೆ. ಆತ್ಮನು ಆತ್ಮನಾಗಿರದಂತೆ ಬಿಡುವ ಶೋಧನೆಯನ್ನು ನಾವು ಎದುರಿಸತಕ್ಕದ್ದು! ಅಜ್ಞಾನದಿಂದ ಮತ್ತು ಮೂರ್ಖತನದಿಂದ ಆತ್ಮನನ್ನು ಅವಮಾನಗೊಳಿಸಬೇಡಿರಿ. ಅಸಹಜವಾದ ಅನುಭವಗಳು ಕ್ರೈಸ್ತ ಬೆಳವಣಿಗೆಗೆ ಅನಾವಶ್ಯಕವಾದವುಗಳಾಗಿರುತ್ತವೆ. ಅತೀ ಹೆಚ್ಚಾಗಿ ನಾವು ಯೇಸುವನ್ನು ತಿಳಿಯುವಾಗ, ಪ್ರೀತಿಸುವಾಗ ಮತ್ತು ಜೀವಿಸುವಾಗ, ನಾವು ಆತ್ಮನಿಂದ ನಡಿಸಲ್ಪಡುತ್ತಿರುವೆವೆಂದು ತಿಳಿದುಕೊಳ್ಳುವೆವು.

ಎಫೆಸ 1:3ರಲ್ಲಿ, ಕ್ರಿಸ್ತನಲ್ಲಿ ಎಲ್ಲಾ ಆತ್ಮಿಕ ಆಶೀರ್ವಾದಗಳೊಂದಿಗೆ ದೇವರು ನಮ್ಮನ್ನು ಆಶೀರ್ವದಿಸುತ್ತಾನೆಂದು ನಮ್ಮ ಜ್ಞಾಪಕಕ್ಕೆ ಪೌಲನು ತರುತ್ತಾನೆ. ಈ ಆತ್ಮಿಕ ಆಶೀರ್ವಾದಗಳು ಪರಿಶುದ್ಧಾತ್ಮನಿಂದ ಮಾತ್ರವೇ ಕೊಡಲ್ಪಡುತ್ತವೆ. ಎಫೆಸ 1:3ರಲ್ಲಿ ಇಡೀ ತ್ರಿತ್ವಕ್ಕೆ ಕಾರ್ಯಾಚರಣೆಯಲ್ಲಿದೆ. ಎಫೆಸದವರಿಗೆ ಬರೆದ ಪತ್ರಿಕೆಯು ಸಭೆಯ ಮೇಲೆ ಕೇಂದ್ರೀಕರಿಸಿದ ನಮ್ಮ ದೈವಜ್ಞಾನ ಶಾಸ್ತ್ರೀಯ ಪುಸ್ತಕವಾಗಿದೆ. ಅದು ಎಫೆಸದಲ್ಲಿಯ ಸಭೆಗೆ ಬರೆಯಲ್ಪಟ್ಟಿತು, ದೇವರು ಕ್ರಿಸ್ತನಲ್ಲಿ, ಸಭೆಯಲ್ಲಿ ಆತ್ಮನ ಮೂಲಕ ಎಲ್ಲಾ ಆತ್ಮಿಕ ಆಶೀರ್ವಾದಗಳನ್ನು ನಮಗೆ ಕಳುಹಿಸುತ್ತಾನೆ! ಎಂಥಾ ಹೇಳಿಕೆ!

## ಪರಿಶುದ್ಧಾತ್ಮನು ನಮ್ಮಾತನಾಗಿದ್ದಾನೆ

ತಂದೆಯಾದ ದೇವರು ಹಳೇ ಒಡಂಬಡಿಕೆಯಲ್ಲಿ ತ್ರೈಯೇಕತ್ವವನ್ನು ಪ್ರತಿನಿಧೀಕರಿಸಿದ್ದಾನೆ. ಕುಮಾರನಾದ ದೇವರು ನಮ್ಮ ಮಧ್ಯದಲ್ಲಿ ವಾಸಮಾಡಿದಾಗ ತ್ರೈಯೇಕತ್ವವನ್ನು ಪ್ರತಿನಿಧೀಕರಿಸಿದನು (ಮತ್ತಾಯ, ಮಾರ್ಕ, ಲೂಕ, ಯೋಹಾನ). ಕ್ರಿಸ್ತನು ಹಿಂದಿರುಗಿ ಬರುವವರೆಗೆ ತ್ರೈಯೇಕತ್ವವನ್ನು ಪ್ರತಿನಿಧೀಕರಿಸಲು ಪರಿಶುದ್ಧಾತ್ಮನಾದ ದೇವರು ಇಳಿದು ಬಂದನು (ಅಪೊಸ್ತಲರ ಕೃತ್ಯಗಳು 2). ನಮ್ಮದು ಆತ್ಮನ ಯುಗವಾಗಿದೆ. ರಕ್ಷಣೆಯ ನಮ್ಮ ಭರವಸೆಯು ಆತ್ಮನ ಆಂತರ್ಯದಲ್ಲಿಯ ವಾಸಿಸುವಿಕೆಯಾಗಿದೆ (ಅಪೊಸ್ತಲರ ಕೃತ್ಯಗಳು 2:38; 5:32; ಎಫೆಸ 1:14). ಆತ್ಮನು ಕೊಡುವಾತನಾಗಿರುವದಿಲ್ಲ; ಆತ್ಮನು ವರವಾಗಿದ್ದಾನೆ. ನಮ್ಮ ದೇಹಗಳು "ಪರಿಶುದ್ಧಾತ್ಮ ಆಲಯವಾಗಿವೆ" (1 ಕೊರಿಂಥ 6:19, 20).

ಕ್ರಿಸ್ತನ ರಕ್ತವು ಸಭೆಯನ್ನು ಕೊಂಡುಕೊಂಡಿತು (ಅಪೊಸ್ತಲರ ಕೃತ್ಯಗಳು 20:28; ಎಫೆಸ 5:25-27; 1 ಕೊರಿಂಥ 6:20). ದೇವರು ಮೊದಲನೆಯ ಸಭೆಯನ್ನು ಮಾಡಿದಾಗ, ಆತನು ಅದನ್ನು ಸರಿಯಾಗಿ ಮಾಡಿದನು. ಅಪೊಸ್ತಲರ ಕೃತ್ಯಗಳು 2ರಲ್ಲಿ ದೇವರು ಸಭೆಯ ವ್ಯವಹಾರದಲ್ಲಿ ತೊಡಗಿದನು (ಪಂಚಾಶತ್ತಮ ದಿನ). ಆತನು ತನ್ನನ್ನು ಸಭೆಯಿಂದ ತೆಗೆದು ಹಾಕಿಕೊಂಡಿಲ್ಲ. ದೇವರು ಎಂದೂ "ಸಭಾಪಂಗಡದ ವ್ಯವಹಾರದಲ್ಲಿ" ತೊಡಗಿರುವದಿಲ್ಲ. ಆತ್ಮನು ಸಭೆಯ ಜೀವವಾಗಿದ್ದಾನೆ (1 ಕೊರಿಂಥ 3:16), ಆದರೆ ಆತನು ಕ್ರೈಸ್ತರಲ್ಲಿ ಆಂತರಿಕವಾಗಿ ವಾಸಿಸುವಂತೆ ಮಾತ್ರವೇ ಸಭೆಯಲ್ಲಿ

ಅಸ್ತಿತ್ವದಲ್ಲಿರಬಲ್ಲನು. ಇಂದು ಭೂಲೋಕದ ಮೇಲೆ ಕೇವಲ "ಪರಿಶುದ್ಧ ಸ್ಥಳಗಳು" ಕ್ರೈಸ್ತ ಹೃದಯಗಳಾಗಿರುತ್ತವೆ.

ದೇವರು ಸಭೆಗೆ ಎರಡು ಮಹಾ ಆಶೀರ್ವಾದಗಳನ್ನು ಕೊಟ್ಟಿರುತ್ತಾನೆ: ಪ್ರಾರ್ಥನೆ ಮತ್ತು ಆತ್ಮನು ಎರಡರೊಂದಿಗೂ ನಾವು ಸರಿಯಾಗಿ ಮಾಡುತ್ತಿರುವದಿಲ್ಲ. ನಾವು ಅನುಭವಗಳನ್ನು, ವಿಧಾನಗಳನ್ನು, ಕಲೆಗಳನ್ನು ಮತ್ತು ಚಮತ್ಕಾರಗಳನ್ನು ಬಯಸುತ್ತೇವೆ; ಆದಾಗ್ಯೂ ಪ್ರಾರ್ಥಿಸುವಲ್ಲಿ ಮತ್ತು ಆತ್ಮನನ್ನು ಅನುಸರಿಸುವಲ್ಲಿ ಸೋತುಹೋಗುತ್ತೇವೆ; ಆತ್ಮನ ಮೇಲೆ ಅವಲಂಭಿಸುವದಕ್ಕಿಂತ ಕಾರ್ಯಕ್ರಮಗಳ ಮೇಲೆ ಅವಲಂಭಿಸುವುದು ಸುಲಭವಾಗಿರುತ್ತದೆ. ಸೈತಾನನು ಶೋಧಿಸುತ್ತಾನೆ; ಆತ್ಮನು ಬಲಪಡಿಸುತ್ತಾನೆ (ಎಫೆಸ 3:14-19). "ಆದಿ ಸಭೆಯಿಂದ ಆತ್ಮನು ತೆಗೆದು ಹಾಕಲ್ಪಟ್ಟಿದ್ದರೆ, ಅವರು ಮಾಡಿದ್ದರ 90% ಇಲ್ಲವಾಗಿ ಹೋಗುತ್ತಿತ್ತು, ಆದರೆ ಆತ್ಮನು ಇಂದು ತೆಗೆದು ಹಾಕಲ್ಪಟ್ಟರೆ 10% ಇಲ್ಲವಾಗಿ ಹೋಗುವುದು" ಎಂದು ಎ. ಡಬ್ಲ್ಯೂ. ಟೋಜರ್ ಹೇಳಿದ್ದಾರೆ. ನಮ್ಮ ಉನ್ನತ ಮಟ್ಟದ ಸಾಧನಗಳಿಲ್ಲದೇ ಶಿಷ್ಯರು ಮೊದಲನೆಯ ಶತಮಾನದಲ್ಲಿ ಜಗತ್ತಿಗೆ ಸುವಾರ್ತೆ ಸಾರಿದರು. ಪ್ರಾರ್ಥನೆ, ಪರಿಶುದ್ಧ ಬರಹಗಳನ್ನು ಮತ್ತು ಆತ್ಮನನ್ನು ಎಂದೂ ಬೇರೆಯಾಗಿ ಮಾಡಬೇಡಿರಿ.

ಆತ್ಮನು ಎಲ್ಲಿದ್ದಾನೆ? ಆತನನ್ನು ಹೇಗೆ ಕಂಡುಕೊಳ್ಳಬಹುದು? ಅನುಭವಗಳಲ್ಲಿ ಅಲ್ಲ. ಪಂಚಾಶತ್ತಮದ ದಿನದಂದು ನಡೆದ ಘಟನೆಗಳು ಪುನಃ ಎಂದೂ ಘಟಿಸಲಿಲ್ಲ; ವಾಣಿಗಳನ್ನಾಡುವುದು ನಿಂತು ಹೋಯಿತು (1 ಕೊರಿಂಥ 13:8-13). ಆತ್ಮನು ಪರಿಶುದ್ಧ ಬರಹಗಳೊಳಗೆ ಕಂಡುಕೊಳ್ಳಲ್ಪಡುತ್ತಾನೆ. "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ" (ಕೊಲೊಸ್ಸೆ 3:16ಎ). ಆತ್ಮನು "ಸತ್ಯದ ಆತ್ಮನಾಗಿದ್ದಾನೆ" (ಯೋಹಾನ 14:17; 15:26; 16:13). ಅದ್ಭುತ ಕಾರ್ಯವನ್ನು ನಿರೀಕ್ಷಿಸಲು ಜನರಿಗೆ ಹೇಳಲ್ಪಟ್ಟಿತು. "ಅಧ್ಯಯನ" ಮಾಡಬೇಕೆಂದು ಪೌಲನು ತಿಮೊಥೆಯನಿಗೆ ಹೇಳಿದನು (2 ತಿಮೊಥೆ 2:15; KJV). ಎಲ್ಲಾ ಆತ್ಮಿಕ ಮಾರ್ಗದರ್ಶನವು ಪರಿಶುದ್ಧ ಬರಹಗಳ ಮೇಲೆ ಅವಲಂಭಿಸಿರುತ್ತದೆ. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಯಾರೂ ಕನಸಿನಿಂದ, ದೇವದೂತನ ಸಂದರ್ಶಕನಿಂದ ಇಲ್ಲವೇ ಆತ್ಮನ ನೇರವಾದ ಕಾರ್ಯಾಚರಣೆಯಿಂದ ಮಾರ್ಪಾಟು ಹೊಂದಲಿಲ್ಲ. ಎಲ್ಲವೂ ಮಾನವ ಸಾಧನವನ್ನು - ವಾಕ್ಯ, ಸುವಾರ್ತೆಯ ಸಂದೇಶವನ್ನು ಒಳಗೊಂಡಿತ್ತು. ರಾಜ್ಯದ ಬೀಜವು ದೇವರ ವಾಕ್ಯವಾಗಿರುತ್ತದೆ (ಲೂಕ 8:11). ಪರಿಶುದ್ಧ ಬರಹಗಳಲ್ಲಿ ಯಾರೂ ಎಂದೂ "ಆತ್ಮನಲ್ಲಿ ಬಾಪ್ತಿಸ್ಮ ಹೊಂದಿರಿ" ಇಲ್ಲವೇ "ವರವುಳ್ಳವರಾಗಿರಿ" ಎಂದು ಆಜ್ಞಾಪಿಸಲ್ಪಟ್ಟಿರುವದಿಲ್ಲ. ಆತ್ಮಿಕ ವ್ಯಕ್ತಿಯಾಗಿರುವದಕ್ಕಿಂತ ಹೆಚ್ಚಾಗಿ ಆತ್ಮಿಕ ವರಗಳನ್ನು ಹೊಂದಿಕೊಳ್ಳುವದರಲ್ಲಿ ಯಾಕೆ ನೀವು ಆಸಕ್ತರಾಗಿರುವಿರಿ? ಮಾನವ ಕುಲವು "ಹೊಂದಿಕೊಂಡಿರುವದರ" ಮೇಲೆ ಕೇಂದ್ರೀಕರಿಸುತ್ತದೆ; "ಇರುವದರಲ್ಲಿ" ಆತ್ಮನು ಕೇಂದ್ರೀಕರಿಸುತ್ತಾನೆ. ಇದಲ್ಲದೇ, ಅದ್ಭುತಕಾರ್ಯಗಳು ಸಾಮಾನ್ಯವಾದವುಗಳಾಗಿದ್ದರೆ, ಅವು ಅದ್ಭುತಕಾರ್ಯಗಳಾಗಿರುವದಿಲ್ಲ! ಪರಿಶುದ್ಧತೆಗಾಗಿ, ಪ್ರೌಢತೆಗಾಗಿ ನಾವು ಆತ್ಮನನ್ನು ಹುಡುಕತಕ್ಕದ್ದು. ನಾವೇನಾಗುತ್ತೇವೆಯೋ ಅದಾಗಲು ಹೋಗುತ್ತೇವೆ.

ಪ್ರೀತಿಯಿರುವಲ್ಲಿ ಆತ್ಮನು ಕಂಡುಕೊಳ್ಳಲ್ಪಡುತ್ತಾನೆ. ಇದು ಕ್ವಚಿತ್ತಾಗಿ ಯೋಚಿಸಲ್ಪಟ್ಟಿದೆ. ಆತ್ಮಿಕ ವರಗಳ ಬಗ್ಗೆ ಎರಡು ಬೋಧನಾತ್ಮಕ ಅಧ್ಯಾಯಗಳು 1 ಕೊರಿಂಥ 12 ಮತ್ತು 14. ಮಧ್ಯದಲ್ಲಿ ಏನಿರುವುದು? 1 ಕೊರಿಂಥ 13, ಪ್ರೀತಿಯ ಮೇಲೆ ಒಂದು ದೊಡ್ಡ ಅಧ್ಯಾಯ! "... ನಮಗೆ ಕೊಟ್ಟಿರುವ ಪರಿಶುದ್ಧಾತ್ಮನ ಮೂಲಕವಾಗಿ ದೇವರ ಪ್ರೀತಿ ರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ" (ರೋಮಾಪುರ

5:5). ಆತ್ಮನ ಫಲವು ಪ್ರೀತಿಯಾಗಿದೆ! *ಪರೀಕ್ಷೆಯ ಸಮಯ!* 1 ಕೊರಿಂಥ 13ನ್ನು ಓದಿರಿ, ಮತ್ತು ಆಗ "ಪ್ರೀತಿಗೆ" ಬದಲಾಗಿ "ಕ್ರಿಸ್ತ" ಎಂದು ಇಡಿರಿ. ಇದು ಪತ್ಯಕ್ಕೆ ತೊಂದರೆ ಮಾಡುವದಿಲ್ಲ. ಆ ಮೇಲೆ *ನಿಮ್ಮ* ಹೆಸರನ್ನು ಬದಲಾಗಿ ಇಡಿರಿ. ನೀವು ಹೇಗೆ ಮಾಡುತ್ತಿರುವಿರಿ? ನಿಮ್ಮ ಅನುದಿನದ ನಡೆಯು ಇತರರ ಜೀವನದಲ್ಲಿ ಭಿನ್ನತೆಯನ್ನು ಮಾಡುತ್ತಿರುವದೋ? "ನೀವೇ ನಮ್ಮ ಯೋಗ್ಯತಾಪತ್ರ; ಅದು ನಮ್ಮ ಹೃದಯಗಳಲ್ಲೇ ಬರೆದದೆ; ಆ ಪತ್ರವನ್ನು ಎಲ್ಲರೂ ಬಲ್ಲರು, ಎಲ್ಲರೂ ಓದುತ್ತಾರೆ" (2 ಕೊರಿಂಥ 3:2) ಎಂದು ಪೌಲನು ಕ್ರೈಸ್ತರಿಗೆ ಹೇಳಿದನು.

ಆತ್ಮನು ಎಲ್ಲಿದ್ದಾನೆ? ಆತ್ಮನು "ಆತ್ಮನ ಫಲದಲ್ಲಿ" ಕಂಡು ಬರುತ್ತಾನೆ. ಅದು "ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ - ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮ ಶಾಸ್ತ್ರವೂ ಆಕ್ಷೇಪಿಸುವದಿಲ್ಲ" (ಗಲಾತ್ಯ 5:22, 23). ಫಲ ಎಂಬುದು ಏಕವಚನದಲ್ಲಿದೆ; ಪರಿಣಾಮಗಳು ಬಹುವಚನದಲ್ಲಿದೆ. ಇದರ ಮೇಲೆ ಮತ್ತು ಅದರ ಮೇಲೆ ನಾವು ಕಾರ್ಯ ಮಾಡುವದಿಲ್ಲ. ಆತ್ಮನ ಫಲವು ಒಂದಾಗಿ ಬರುತ್ತದೆ. ತತ್ವವು ಫಲ ಬೆಳೆಯುವದರಲ್ಲಿ ಒಂದಾಗಿದೆ, ಆದರೆ ಉತ್ಪಾದನೆಯಾಗಿರುವದಿಲ್ಲ. ಅನೇಕ ಕ್ರೈಸ್ತರು ನಿರಾಶರಾಗಿದ್ದಾರೆ ಯಾಕಂದರೆ ಅವರು ಮಾನವ ಕಾರ್ಯಗಳಿಂದ ಆತ್ಮಿಕ ಫಲವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಸ್ವಯಂ ತರಬೇತಿಯ ಕೋರ್ಸುಗಳ ಮೂಲವಾಗಿ ಸೋತು ಹೋಗುತ್ತವೆ. ಆತ್ಮನಿಂದ ಮಾತ್ರವೇ ನಾವು ಪ್ರೌಢರಾಗಬಹುದು. ಆತ್ಮಿಕತೆಯು ಅನುಭವಗಳಿಂದ, ವಿಶೇಷ ವರಗಳಿಂದ, ಇಲ್ಲವೇ ಅದ್ಭುತಕಾರ್ಯಗಳಿಂದ ಅಳತೆ ಮಾಡಲ್ಪಡಬಾರದು. ಆತ್ಮಿಕತೆಯು ಆತ್ಮಿಕ ಒಳ್ಳೆಯ ತನದಿಂದ ಹಾಗೂ ಪ್ರೌಢಾವಸ್ಥೆಯಿಂದ ಮಾತ್ರವೇ ಅಳೆಯಲ್ಪಡಬೇಕು. ಆತ್ಮಿಕವಾಗಿ ನಾವು ಯಾವಾಗಲೂ ಬಯಸುವಂಥದ್ದು ಆತ್ಮನ ಫಲದಿಂದ ಬರುತ್ತದೆ! ವಿಷಯವು ಒಳಗೆ ತೆಗೆದುಕೊಳ್ಳು ವಂಥದ್ದಾಗಿರುತ್ತದೆ ಆದರೆ ಹೊರಗೆ ಹಾಕುವಂಥದ್ದಾಗಿರುವದಿಲ್ಲ. ಕಾಲಕ್ರಮದಲ್ಲಿ, ಕಾಳಿನತೆನೆಯು ಕಾಳನ್ನು ಮಾಡುತ್ತದೆ. ಮನುಷ್ಯನು ಕಾಳನ್ನು ಉತ್ಪಾದಿಸುವದಿಲ್ಲ. ಕ್ರಿಸ್ತನಲ್ಲಿ, ಆತ್ಮನಿಂದ, ದೇವರು ಶಿಷ್ಯರನ್ನು ಮಾಡುತ್ತಾನೆ. ನಾವೆಲ್ಲರೂ ಸ್ವ - ನಿಯಂತ್ರಣವನ್ನು ಅಪೇಕ್ಷಿಸುತ್ತೇವೆ. ನಮ್ಮನ್ನು ನಾವು ದೇವರ ನಿಯಂತ್ರಣದೊಳಗೆ ಕೊಡುವವರೆಗೆ, ನಾವು ನಮ್ಮನ್ನು ನಿಯಂತ್ರಿಸಲಾರೆವು. ಆತ್ಮನ ಪರಿಣಾಮವು ಕ್ರಿಸ್ತನಂತಿರುವುದು ಆಗಿರುತ್ತದೆ. ನಾವು "ಆತ್ಮನಂತೆ" ಇರಲಾರೆವು; ನಾವು "ಕ್ರಿಸ್ತನಂತೆ" ಇರುವೆವು. ಮಗುವು ಜನಿಸಿದಾಗ, ಅವನು ಸಂಪೂರ್ಣವಾಗಿ ಮಾನವನಾಗಿರುವನು. ಅವನು ಎಂದೂ ಹೆಚ್ಚು ಮಾನವನಾಗಿರಲಾರನು. ಬಾಪ್ತಿಸ್ಮದಲ್ಲಿ ನಮಗೆ ಆತ್ಮನು ಕೊಡಲ್ಪಡುತ್ತಾನೆ. ನಮಗೆ ಎಂದೂ ಹೆಚ್ಚು ಆತ್ಮನು ಇರಲಾರನು. ದೇವರ ಪ್ರತಿಯೊಂದು ಮಗುವಿಗೆ ಆತನ "ಎಲ್ಲವೂ" ಇರುತ್ತದೆ. "ಆತ್ಮನಿಗೆ ನಮ್ಮ 'ಎಲ್ಲವೂ' ಇರುತ್ತದೋ?" ಎಂಬುದು ಪ್ರಶ್ನೆಯಾಗಿರುತ್ತದೆ. ಆತ್ಮನು ನಮ್ಮವನಾಗಿರುತ್ತಾನೆ. ಆತ್ಮಿಕತೆಯ ರಹಸ್ಯವು ಧ್ವನಿ ಸುರುಳಿಗಳಲ್ಲಿ, ಸಮ್ಮೇಳನಗಳಲ್ಲಿ ಅನುಭವಗಳಲ್ಲಿ ಇಲ್ಲವೇ ಚಮತ್ಕಾರಗಳಲ್ಲಿ ಇರುವದಿಲ್ಲ. ಆತ್ಮಿಕತೆಯ ರಹಸ್ಯವು ಆತ್ಮನಾಗಿದ್ದಾನೆ! "ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ" (ಎಫೆಸ 5:9).

## ಆತ್ಮಭರಿತರಾಗಿರುವುದು

ಎಫೆಸ 5ರಲ್ಲಿ ಪೌಲನು ಮೂರು ಬಲವಾದ ಆಜ್ಞೆಗಳನ್ನು ಕೊಟ್ಟಿರುವನು: "... ದೇವರನ್ನು ಅನುಸರಿಸುವವರಾಗಿರಿ" (ವಚನ 1); "... ಪ್ರೀತಿಯಲ್ಲಿ ನಡೆದುಕೊಳ್ಳಿರಿ"

(ವಚನ 2ಎ); "... ಬೆಳಕಿನವರಂತೆ ನಡೆದುಕೊಳ್ಳಿರಿ" (ವಚನ 8). ಆ ಮೇಲೆ ಅವನು, "ಪರಿಶುದ್ಧಾತ್ಮಭರಿತರಾಗಿರಿ" (ವಚನ 18) ಎಂದು ಹೇಳಿದನು. ಮೊದಲನೆಯದಾಗಿ, ಆಜ್ಞೆಯು ಆಜ್ಞಾರ್ಥಕವಾದ ಮನೋಭಾವನೆಯಲ್ಲಿ ಇರುವದನ್ನು ಗಮನಿಸಿರಿ. "ಆತ್ಮನಿಂದ *ನೀವು* ತುಂಬಲ್ಪಡಿರಿ" ಎಂಬುದು ಪೌಲನ ಅರ್ಥ. ಆಯ್ಕೆ, ತೀರ್ಮಾನ, ಮತ್ತು ಕೃತ್ಯವು ನಮ್ಮದು. ಇದು ಒತ್ತಿ ಹೇಳುವುದಾಗಿದೆ.

ಎರಡನೆಯದಾಗಿ, "ತುಂಬಲ್ಪಡಿರಿ" ಎಂಬ ಕ್ರಿಯಾಪದವು ಬಹುವಚನದಲ್ಲಿದೆ: "ನಾವೆಲ್ಲರೂ" ತುಂಬಲ್ಪಡಬೇಕು. "ನಾವೆಲ್ಲರೂ" ಎಂದೂ ಅದ್ಭುತಕರವಾದವರಗಳನ್ನು ಹೊಂದಿಕೊಂಡಿರುವದಿಲ್ಲ!

ಮೂರನೆಯದಾಗಿ, ಅದು ಕರ್ಮಣಿ ಪ್ರಯೋಗದಲ್ಲಿದೆ: "ಆತ್ಮನು ನಿಮ್ಮನ್ನು ತುಂಬಲಿ." ಪೂರ್ತಿಯಾದ ಕಪ್ಪನ್ನು ತುಂಬಲಿಕ್ಕಾಗುವದಿಲ್ಲ. ತುಂಬಲ್ಪಡುವದಕ್ಕಾಗಿ ಮೊದಲು ಒಪ್ಪಿಸಿಕೊಳ್ಳಬೇಕು, ಬರಿದಾಗಿ ಮಾಡಿಕೊಳ್ಳಲ್ಪಡಬೇಕು. ತುಂಬಿದ ಪಾತ್ರೆಯೊಳಗೆ ಏನನ್ನೂ ಕೂಡಿಸಲಾಗದು. ಸ್ವಾರ್ಥಕ್ಕೆ ನಾವು ಸಾಯುವಂತೆ, ಇಲ್ಲವೇ ಸ್ವಾರ್ಥವನ್ನು ಬರಿದು ಮಾಡುವಂತೆ, ನಾವು ಆತ್ಮನಿಂದ ತುಂಬಲ್ಪಡಬಹುದು.

ನಾಲ್ಕನೆಯದಾಗಿ, ಆಜ್ಞೆಯು ವರ್ತಮಾನ ಕಾಲದಲ್ಲಿದೆ. ಯೇಸುವು ನಮ್ಮನ್ನು ಅನಾಥರನ್ನಾಗಿ ಬಿಡಲಿಲ್ಲ (ನೋಡಿರಿ ಯೋಹಾನ 13:18). "ಆತ್ಮನಿಂದ ತುಂಬಿಕೊಂಡಿರುವಂತೆ *ನೋಡಿಕೊಳ್ಳಿರಿ"* ಎಂದು ಪೌಲನು ಹೇಳುತ್ತಿದ್ದನು. ತುಂಬಲ್ಪಡುವುದು ಸತತವಾದ, ಜೀವನಾದ್ಯಂತದ ವಿಧಾನವಾಗಿದೆ. ನಾವು ತುಂಬಲ್ಪಟ್ಟಿದ್ದೇವೆ ಮತ್ತು ಪುನಃ ತುಂಬಿಸಲ್ಪಡುತ್ತಿದ್ದೇವೆ. ಈ ವಿಧಾನವನ್ನು ಹಡಗಿನ ಮೇಲೆ ಹಾಯಿಗಳನ್ನು ಗಾಳಿಯು ತುಂಬಿಕೊಳ್ಳುವಂತೆ ಇದೆಯೆಂದು ಯಾರೋ ಒಬ್ಬರು ವಿವರಿಸಿದ್ದಾರೆ.

ಈ ಪ್ರಶ್ನೆಯನ್ನು ನಿನಗೆ ಕೇಳಿಕೋ: "ನನ್ನ ಕ್ರೈಸ್ತ ನಡೆಯುವಿಕೆಯೊಂದಿಗೆ ನನಗೆ ಸಂತೋಷವಾಗಿದೆಯೋ?"

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

© 2009 Truth for Today